# ನೀವು ಕೇಳಿದಿರಿ?

ಕೆ.ಎಂ. ಕೊಟ್ರಸ್ವಾಮಿ, ಸಂಡೂರು

ಶಕುನಿಯೇ ಇರದ ಮಹಾಭಾರತ ಚಿತ್ರಣ ಹೇಗಿರುತ್ತಿತ್ತು?



ಚಿಕ್ಕದಾಗಿ, ನೀರಸವಾಗಿ.

ಹೆಚ್.ವಿ. ಶ್ರೀಧರ್, ಬೆಂಗಳೂರು

‘ಒಬ್ಬ ವ್ಯಕ್ತಿ, ಒಂದೇ ಹುದ್ದೆ’ ಎಂದಾದರೆ ಐಪಿಎಲ್ ಆಡುವವರು ಟೆಸ್ಟ್, ಒಡಿಐ ಆಡುವಂತಿಲ್ಲವೆ?

ಐಪಿಎಲ್ ಎಂದರೆ ಇಂಡಿಯನ್ ಪೊಲಿಟಿಕಲ್ ಲೀಗ್ ಎಂದಾದಾಗ, ಇನ್ನಾವುದನ್ನೂ ಆಡುವಂತಿಲ್ಲ.

ಬಿದರಹಳ್ಳಿ ಐಶ್ವರ್ಯ, ಹಿರೇಹಡಗಲಿ

ಪ್ರಾಮಾಣಿಕತೆ ಜಾಸ್ತಿಯಾದಂತೆ ವ್ಯಕ್ತಿ ಏಕಾಂಗಿಯಾಗುತ್ತಾನೆ. ಏಕೆ?

ಎರಡನೆಯ ಅಂಗಿ ಕೊಳ್ಳಲೂ ದುಡ್ಡಿರದ ಸ್ಥಿತಿ ಮುಟ್ಟುವುದರಿಂದ.

ಷಣ್ಮುಖ ಎಸ್.ಹೆಚ್. ಹಳೇಬಾತಿ ಗ್ರಾಮ

ನಮ್ಮ ಮುಖದಲ್ಲಿ ಯಾವಾಗಲೂ ಸ್ಮೈಲ್ ಇರಬೇಕೆಂದರೆ ಏನ್ಮಾಡ್ಬೇಕು?



ಆ ರೀತಿ ಕಾಣುವಂತೆ ಪ್ಲಾಸ್ಟಿಕ್ ಸರ್ಜರಿ ಮಾಡಿಸಿಕೊಳ್ಳಿ.

ಆಶಾ ಅಪ್ರಮೇಯ, ದಾವಣಗೆರೆ

‘ಸೆಲೆಬ್ರಿಟಿ’ ಶಬ್ದಕ್ಕೆ ಕನ್ನಡದಲ್ಲಿ ಪರ್ಯಾಯ ಪದ ಇಲ್ಲವೆ?

‘ಸ್ಟಾರ್’ ಎನ್ನಬಹುದು!

ಸಿ.ಎಸ್. ಸೂರ್ಯಪ್ರಕಾಶ್, ಬೆಂಗಳೂರು

ಸಮಸ್ಯೆ ಬಂದರೆ ಸಮಿತಿ; ಸಮಿತಿ ಬಂದರೆ ವರದಿ. ವರದಿ ಬಂದರೆ?

ಅದನ್ನು ನಂಬುವುದೋ ಬಿಡುವುದೋ ಎಂಬ ಸಮಸ್ಯೆ!

ಪಿ. ಜಯವಂತ ಪೈ, ಕುಂದಾಪುರ

ರಂಗನಟನಿಗೂ, ಸಿನಿನಟನಿಗೂ ವ್ಯತ್ಯಾಸ?

ರಂಗನಟನದು ಅಂದೇ ಡ್ರಾ(ಮಾ), ಅಂದೇ ಫಲಿತಾಂಶ!

ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ

ಈಗ ಶಾಲಾ ಮೇಷ್ಟುಗಳಿಗೆ ನಾಯಿ ಕಾಯುವ ಕೆಲಸವೂ ಬಂತು. ಮುಂದೆ?

ಇನ್ನೂ ಕೀಳಾದ ಕೆಲಸ ಬಂದೀತು ನಾಯಕರನ್ನು ಕಾಯುವುದು!

ಮೀನಾಕ್ಷಿ ರಾಮಗುಂಡಿ, ಬೈಲಹೊಂಗಲ

ಕನ್ನಡಿ ಎಂದಾದರೂ ತನ್ನನ್ನು ತಾನೇ ನೋಡಿಕೊಂಡಿತ್ತೇ ಸರ್?

ಹೂಂ. ಗಿರಾಕಿ ಬರುವವರೆಗೆ ಕ್ಷೌರದಂಗಡಿಯ ಎದುರುಬದುರು ಕನ್ನಡಿಗಳಿಗೆ ಅದೇ ಕೆಲಸ.

ಮೃತ್ಯುಂಜಯ, ಪಾಂಡವಪುರ

ಹಾಸ್ಯಕ್ಕೂ ಅಪಹಾಸ್ಯಕ್ಕೂ ಏನು ವ್ಯತ್ಯಾಸ?

ಮನವನ್ನು ಅರಳಿಸುವುದು ಹಾಸ್ಯ, ಮನವನ್ನು ನರಳಿಸುವುದು ಅಪಹಾಸ್ಯ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಹಲವು ವೈರುಧ್ಯಗಳ ನಡುವೆ ಸಾಧನೆ ಮಾಡುವುದು ಹೇಗೆ?

ಪಾಟ್‌ಹೋಲ್‌ಗಳ ನಡುವೆ ಡ್ರೈವ್ ಮಾಡಿ ಗುರಿ ಸೇರುವಂತೆ.

ದಿನೇಶ್, ಗುಡ್ಡದೂರು

ಬೈಕ್‌ಗಳಲ್ಲಿ ಓಡಾಡುತ್ತಿದ್ದ ಟೀವಿ ಜ್ಯೋತಿಷಿಗಳು ಇನೋವಾ ಕಾರಲ್ಲಿ ಓಡಾಡುತ್ತಿರುವುದರ ರಹಸ್ಯ?

ಜ್ಯೋತಿಷ ಸುಳ್ಳಾದವರು ಬೀಸಿದ ಕಲ್ಲಿಂದ ತಪ್ಪಿಸಿಕೊಳ್ಳಲು ಕಾರ್ ಉತ್ತಮವೆಂದು.

ಎಂ.ಎ. ಕುಮಾರ್, ಬೆಂಗಳೂರು

ಜನ್ಮದಾತ ಜನ್ಮದಾತೆಗಿಂತ ದೊಡ್ಡವರಾರು?

ಅವರಿಗಿಂತ ಎಷ್ಟೋ ವರ್ಷ ಮುಂಚೆಯೇ ಮೇಲೆ ಹೋದ ಅವರ ಜನ್ಮದಾತ/ತೆಯರು.

ಬಿ. ಚಂದ್ರೇಗೌಡ, ಬೆಂಗಳೂರು

ಗುರುದಕ್ಷಿಣೆಗೂ, ವರದಕ್ಷಿಣೆಗೂ ವ್ಯತ್ಯಾಸ?

ಗುರುದಕ್ಷಿಣೆ ಪೋಸ್ಟ್ ಪೇಯ್ಡ್, ವರದಕ್ಷಿಣೆ ಪ್ರೀ ಪೇಯ್ಡ್.

## ಬಹುಮಾನಿತ ಪ್ರಶ್ನೆ

ಜಗದೀಶ ಬಿ. ಹೊಸೂರು, ಮೈಸೂರು

ಆರೋಗ್ಯಕ್ಕೆ ಬೆಳ್ಳುಳ್ಳಿ ಉಪಯುಕ್ತವಾದರೂ ಕೆಲವರು ತಿರಸ್ಕಾರ ಮಾಡುತ್ತಿದ್ದಾರೆ. ಏಕೆ?

ಘಾಟು ಇರುತ್ತದಲ್ಲ. ಕೆಲವರಿಗೆ ಘಾಟ್ ಸೆಕ್ಷನ್ ಎಂದರೆ ಅಲರ್ಜಿ.

ಬಿ. ಬಸವರಾಜ್, ಹರಿಹರ

ಸೂರ್ಯ ದೇವನಾದರೆ, ಚಂದ್ರ ‘ಮಾಮ’ ಆಗಿದ್ದು ಹೇಗೆ?

ಅಮ್ಮನಂತೆ ಭಾವನೆಗಳಿಗೆ ಇಂಬು ಕೊಡುವುದರಿಂದ ಅಮ್ಮನ ತಮ್ಮನ ಸ್ಥಾನ.

ನರಸಿಂಹಾರೆಡ್ಡಿ ಯಂಕಾಮೋಳ, ಸೇಡಂ

ಧಾರಾವಾಹಿಗಳಲ್ಲಿ ಯಾವಾಗಲೂ ಪೂರ್ಣಚಂದಿರನನ್ನೇ ತೋರಿಸುತ್ತಾರಲ್ಲಾ?

ತಲೆ ಕೆಡಿಸುವುದೇ ಉದ್ದೇಶವಾದ ಧಾರಾವಾಹಿಗಳಿಗೆ ಹುಣ್ಣಿಮೆ ಪ್ರಶಸ್ತ.

ಎಲ್‌ಐಸಿ ವಿಜೇಂದ್ರ, ಮೈಸೂರು

ಹೆಂಗಸರೇಕೆ ಗಂಡನ ಮೇಲಿನ ಕೋಪವನ್ನು ಅಡುಗೆಮನೆಯ ಪಾತ್ರೆಗಳ ಮೇಲೆ ತೋರುವುದು?



ಅದೇ ‘ಪ್ಲೇಟ್’ ಹಾಕ್ಬೇಡಿ, ‘ಕುಕ್ಕರ್’ಬಡೀರಿ, ನಿಮ್ಮ ಐಡಿಯಾ ಎಲ್ಲ ‘ಡಬ್ಬ’ರೀ ಎಂದೆಲ್ಲ ಸೂಚಿಸಲು.

ಮಲ್ಲಿಕಾರ್ಜುನ, ಸುರಧೇನುಪುರ

ಮಣ್ಣು ತಿಂದರೂ ಮರೆಯಲ್ಲಿ ತಿನ್ನಬೇಕು ಎಂದೇಕೆ ಹೇಳಿದ್ದಾರೆ?

ಮಣ್ಣು ತಿನ್ನೋ ಕೆಲಸ ಮಾಡಿರೋದು ಜಗಜ್ಜಾಹೀರಾಗದಿರಲಿ ಅಂತ.

ಸಿದ್ದರಾಮ ಡಿ. ಚಿಮಡಿ

ಒಲಿಂಪಿಕ್ ಗೇಮ್ಸ್‌ನಲ್ಲಿ ಭಾರತಕ್ಕೆ ಜಾಸ್ತಿ ಮೆಡಲ್ ಬರಲು ಏನು ಮಾಡಬೇಕು?

ಇತರ ದೇಶಗಳು ಹೇಗಾದರೂ ಮಾಡಿ ಕಡಿಮೆ ಮೆಡಲ್ ಪಡೆಯಬೇಕು.

■ ರಾಮ್